RNU AIR DHARWAD

DECEMBER 14, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಚಿಟಗುಪ್ಪಿ ಆಸ್ಪತ್ರೆ ಸಭಾಂಗಣದಲ್ಲಿ, ಕೇಂದ್ರ ಪುರಸ್ಕೃತ, ಆರೋಗ್ಯ ವಿಮೆ ಯೋಜನೆ, ವೆಲ್‌ನೆಸ್ ಸೆಂಟರ್, ಕಾರ್ಯಾರಂಭ.
- ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ, ನಾಳೆ ಮತ್ತು ನಾಡಿದ್ದು, 'ಕೃತಕ ಬುದ್ಧಿಮತ್ತೆಯ ಜವಾಬ್ದಾರಿಯುತ ಬಳಕೆ', ಅಂತಾರಾಷ್ಟ್ರೀಯ ವಿಚಾರ ಸಂಕಿರಣ.
- ಗಾಂಧಿ ಗ್ರಾಮ ಪ್ರಶಸ್ತಿ ಪುರಸ್ಕೃತ, 238 ಗ್ರಾಮ ಪಂಚಾಯಿತಿಗಳಲ್ಲಿ, ಮದ್ಯ ಮತ್ತು ಮಾದಕ ವಸ್ತುಗಳ ಬಗ್ಗೆ, ಜನ ಜಾಗೃತಿ.
- ಇಂದು, ರಾಷ್ಟ್ರೀಯ ಇಂಧನ ಸಂರಕ್ಷಣಾ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ಸುದೃಢ ಆರೋಗ್ಯ ಹೊಂದಲು, ಊಟವೇ ಔಷಧವಾಗಬೇಕು. ಆಕಸ್ಮಿಕವಾಗಿ ಹದಗೆಟ್ಟಲ್ಲಿ, ಸಕಾಲಿಕ ಚಿಕಿತ್ಸೆ ಮತ್ತು ಆರೈಕೆಗೆ, ಆದ್ಯತೆ ನೀಡಬೇಕು ಎಂದು, ಕೇಂದ್ರ ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಕೇಂದ್ರ ಸರ್ಕಾರಿ ಉದ್ಯೋಗಿಗಳಿಗೆ, ಮನವಿ ಮಾಡಿದ್ದಾರೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಚಿಟಗುಪ್ಪಿ ಆಸ್ಪತ್ರೆ ಸಭಾಂಗಣದಲ್ಲಿ, ಭಾರತೀಯ ಸಂಚಾರ ನಿಗಮ ನಿಯಮಿತ, ಅಖಿಲ ಭಾರತ, ಪಿಂಚಣಿದಾರರ ಯೋಗಕ್ಷೇಮ ಸಂಘ ಆಯೋಜಿಸಿದ್ದ.. ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಜಾರಿಗೊಳಿಸಿದ, ಕೇಂದ್ರ ಆರೋಗ್ಯ ವಿಮೆ ಯೋಜನೆ, ಸಿ.ಜಿ.ಎಚ್.ಎಸ್. ವೆಲ್‌ನೆಸ್ ಕೇಂದ್ರದ ಉದ್ಘಾಟನೆ ನೆರವೇರಿಸಿ, ಅವರು ಮಾತನಾಡಿದರು.

<><><>

ಸಚಿವ ಪ್ರಲ್ಹಾದ ಜೋಶಿ ಧ್ವನಿ 60 ಸೆಕೆಂದುಗಳು

<><><>

ಗಾಂಧಿ ಗ್ರಾಮ ಪ್ರಶಸ್ತಿ ಪುರಸ್ಕೃತ, ರಾಜ್ಯದ 238 ಗ್ರಾಮ ಪಂಚಾಯಿತಿಗಳಲ್ಲಿ, ಮದ್ಯ ಮತ್ತು ಮಾದಕ ವಸ್ತುಗಳ ಬಗ್ಗೆ, ಜನಜಾಗೃತಿ ಕೈಗೊಳ್ಳುವಂತೆ, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ, ಪ್ರಿಯಾಂಕ ಖರ್ಗೆ ಅವರನ್ನು ಕೋರಿದ್ದಾಗಿ, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ, ಶರಣಪ್ಪ ಸಲಾದಪುರ, ತಿಳಿಸಿದ್ದಾರೆ. ಯಾದಗಿರಿಯಲ್ಲಿ ಮಾತನಾಡಿದ ಅವರು, ಅಬಕಾರಿ ತೆರಿಗೆಯಲ್ಲಿ, ಮದ್ಯಪಾನ ಸಂಯಮ ಕಲ್ಯಾಣ ಕಾರ್ಯಕ್ರಮ ಆಯೋಜನೆಗೆ ಕ್ರಮವಹಿಸಲು, ಅಬಕಾರಿ ಇಲಾಖೆಗೆ ಸೂಚಿಸಲಾಗಿದೆ ಎಂದರು.

<><><>

ಮದ್ಯ ಹಾಗೂ ಮಾದಕ ವಸ್ತುಗಳ ದು ್ಪರಿಣಾಮಗಳ ಕುರಿತು, ಪಠ್ಯಪುಸ್ತಕಗಳಲ್ಲಿ ಜಾಗೃತಿ ಪಾಠ ಸೇರಿಸಲು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ ಸೂಚಿಸಲಾಗಿದೆ, ಎಂದು ಅವರು ನುಡಿದರು.

<><><>

ಆರೋಗ್ಯ ಇಲಾಖೆ ವತಿಯಿಂದ, ಮಾಹಿತಿ, ಶಿಕ್ಷಣ ಹಾಗೂ ಸಂವಹನ ಕಾರ್ಯಕ್ರಮದ ಅನುದಾನದಲ್ಲಿ, ಜನ ಜಾಗೃತಿ ಕೈಗೊಳ್ಳಲಾಗುತ್ತಿದೆ ಎಂದು, ಶರಣಪ್ಪ ಹೇಳಿದರು.

<><><>

'ಆತ್ಮ ನಿರ್ಭರ ಭಾರತ ನಿರ್ಮಾಣಕ್ಕೆ, ಪ್ರತಿ ಮನೆಯಲ್ಲೂ, ಸ್ವದೇಶಿ ವಸ್ತುಗಳ ಬಳಕೆ ಅಗತ್ಯ' ಎಂದು, ರಾಜ್ಯಸಭಾ ಸಂಸದ, ನಾರಾಯಣಸಾ ಭಾಂಡಗೆ ತಿಳಿಸಿದ್ದಾರೆ. ಬಾಗಲಕೋಟೆಯ, ಬಸವೇಶ್ವರ ವಿದ್ಯಾವರ್ಧಕ ಸಂಘದ, ಸಭಾ ಭವನದಲ್ಲಿ, 'ಆತ್ಮನಿರ್ಭರ ಭಾರತ ಸಂಕಲ್ಪ ಅಭಿಯಾನ'ದಲ್ಲಿ ಅವರು, 'ಸ್ವದೇಶಿ ಬಳಸಿ–ದೇಶ ಉಳಿಸಿ, ಪ್ರತಿ ಮನೆ ಮನೆಯೂ ಸ್ವದೇಶಿ' ಅಭಿಯಾನದ, ಕರಪತ್ರಗಳನ್ನು ಬಿಡುಗಡೆಗೊಳಿಸಿ ಮಾತನಾಡಿದರು. ಸ್ವದೇಶಿ, ಸ್ಥಳೀಯ ಉತ್ಪನ್ನಗಳನ್ನೇ ಖರೀದಿಸಲು, ಆದ್ಯತೆ ನೀಡೋಣ ಎಂದು ಅವರು ಕರೆ ನೀಡಿದರು.

<><><>

ರಾಜ್ಯದ ಮಹತ್ವದ ರೇಲ್ವೆ ಯೋಜನೆಗಳಿಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ, ಆದ್ಯತೆ ನೀಡಿದ್ದಾರೆ. ತುಮಕೂರು ವ್ಯಾಪ್ತಿಯ, ರಾಯದುರ್ಗ, ದಾವಣಗೆರೆ ರೇಲ್ವೆ ಮಾರ್ಗವನ್ನು, 5 ಸಾವಿರದ 500 ಕೋಟಿ ರೂಪಾಯಿ ವೆಚ್ಚದಲ್ಲಿ, ಕೈಗೊಳ್ಳಲಾಗಿದೆ ಎಂದು, ರೇಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದ್ದಾರೆ. ತುಮಕೂರಿನ ಹೆಗ್ಗೆರೆಯಲ್ಲಿ, ರೇಲ್ವೆ ಮೇಲ್ಸೇತುವೆ ಕಾಮಗಾರಿಗೆ ಚಾಲನೆ ನೀಡಿ, ಮಾತನಾಡಿದರು. ತುಮಕೂರು ಜಿಲ್ಲೆಯಲ್ಲಿ, ಕಳೆದ ಎರಡೂವರೆ ವರ್ಷಗಳಲ್ಲಿ, ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ, ರೇಲ್ವೆ ಮೇಲ್ಸೇತುವೆ, ಕೆಳ ಸೇತುವೆಗಳು ಹಾಗೂ ವರ್ತುಳ ಸೇತುವೆ ನಿರ್ಮಾಣ ಕಾರ್ಯ, ಕೈಗೆತ್ತಿಕೊಳ್ಳಲಾಗಿದೆ, ಎಂದರು.

<><><>

ಗ್ರಾಮೀಣ ಭಾಗದ, ಸಾಮಾನ್ಯ ಕುಟುಂಬದ ವ್ಯಕ್ತಿ, ಬಸವರಾಜ ಹೊರಟ್ಟಿ ಅವರ ಶಿಸ್ತು, ಇಷ್ಟೆತ್ತರಕ್ಕೆ ಬೆಳೆಸಿದೆ. ಅವರ ರಾಜಕೀಯ ಬದುಕು, ಎಲ್ಲರಿಗೂ ಮಾದರಿ ಎಂದು, ವಿಧಾನಸಭಾಧ್ಯಕ್ಷ ಯು.ಟಿ,...ಖಾದರ್ ಹೇಳಿದ್ದಾರೆ. ಪಶ್ಚಿಮ ಶಿಕ್ಷಕರ ಮತ ಕ್ಷೇತ್ರದಿಂದ, ಸತತ 8 ಬಾರಿ ಗೆದ್ದು, 45 ವರ್ಷ ಪೂರೈಸಿದ ಹಿನ್ನೆಲೆ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ನೆಹರು ಮೈದಾನದಲ್ಲಿ ಆಯೋಜಿಸಲಾಗಿದ್ದ, ಬಸವರಾಜ ಹೊರಟ್ಟಿ ಅವರ ಸನ್ಮಾನ ಕಾರ್ಯಕ್ರಮದಲ್ಲಿ, ಅವರು ಮಾತನಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಂಡು ಮಾತನಾಡಿ, ಬಸವರಾಜ ಹೊರಟ್ಟಿ ಅವರು, ವಿಧಾನ ಪರಿಷತ್ ಸಭಾಪತಿಯಾಗಿ, ನಿಷ್ಪಕ್ಷಪಾತವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಎಲ್ಲ

ಪಕ್ಷದವರಿಗೆ, ಸಮಾನ ಗೌರವ ನೀಡಿ, ಸದನಕ್ಕೆ ಮಾರ್ಗದರ್ಶನ ನೀಡುತ್ತಿದ್ದಾರೆ ಎಂದರು. ನೂರಾರು ಸಂಖ್ಯೆಯಲ್ಲಿ, ವಿವಿಧ ಪಕ್ಷಗಳ ಮುಖಂಡರು ಹಾಗೂ ಸಾವಿರಾರು ಸಂಖ್ಯೆಯಲ್ಲಿ ಶಿಕ್ಷಕರು ಪಾಲ್ಗೊಂಡಿದ್ದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(56 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಪ್ರಧಾನಮಂತ್ರಿ ಉಚ್ಚತರ್ ಶಿಕ್ಷಾ ಅಭಿಯಾನ ಹಾಗೂ ಐದು ವಿಶ್ವವಿದ್ಯಾಲಯಗಳ ಸಹಯೋಗದಲ್ಲಿ, 'ಕೃತಕ ಬುದ್ಧಿಮತ್ತೆಯ ಜವಾಬ್ದಾರಿಯುತ ಬಳಕೆ' ವಿಷಯದ, ಅಂತಾರಾಷ್ಟ್ರೀಯ ವಿಚಾರ ಸಂಕಿರಣ, ನಾಳೆ ಮತ್ತು ನಾಡಿದ್ದು, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಆತಿಥ್ಯದಲ್ಲಿ, ಸಂಘಟಿಸಲಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿ, ಎ.ಎಂ.ಖಾನ್, ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಉಪ ಕುಲಪತಿ ಎ.ಎಂ. ಖಾನ್ ಧ್ವನಿ 60 ಸೆಕೆಂದುಗಳು

<><><>

ಇಂದು, ರಾಷ್ಟ್ರೀಯ ಇಂಧನ ಸಂರಕ್ಷಣಾ ದಿನ. "ಸುಸ್ಥಿರ ಶಕ್ತಿಯ ಆವಿ ್ಕರ ಮತ್ತು ನಾಗರಿಕರ ಭಾಗವಹಿಸುವಿಕೆಯನ್ನು, ಉತ್ತೇಜಿಸುವುದು" ಎಂಬ ಧ್ಯೇಯದೊಂದಿಗೆ, ಆಚರಿಸಲಾಗುತ್ತಿದೆ. ಕೇಂದ್ರದ, ಇಂಧನ ಸಚಿವಾಲಯ ಮತ್ತು ಬ್ಯೂರೋ ಆಫ್ ಎನರ್ಜಿ ಎಫಿಷಿಯೆನ್ಸಿ – ಬೀ, ಸುಸ್ಥಿರ ಭವಿ ್ಯಕ್ಕಾಗಿ ಇಂಧನ ಉಳಿತಾಯವನ್ನು ಉತ್ತೇಜಿಸಲು, ಪ್ರಶಸ್ತಿ ಮತ್ತು, ಗೋ ಇಲೆಕ್ಟ್ರಿಕ್ ನಂತಹ, ಪ್ರಮುಖ ಉಪಕ್ರಮಗಳನ್ನು, ವಿಶೇ ವಾಗಿ ಯುವಜನರು ಮತ್ತು ವಿದ್ಯಾರ್ಥಿಗಳನ್ನು ಒಳಗೊಂಡ, ಜನಾಂದೋಲನವಾಗಿ ರೂಪಿಸಿದೆ. ಇಂಧನ ದಕ್ಷತೆ ಮತ್ತು ನವೀಕರಿಸಬಹುದಾದ ಇಂಧನ ಅವಲಂಬಿತ, ಹೊಸ ತಂತ್ರಜ್ಞಾನದ ಬಳಕೆಯನ್ನು, ಪ್ರಚುರ ಪಡಿಸುವುದು; ಮತ್ತು ಶಕ್ತಿಯ ಉಳಿತಾಯದಲ್ಲಿ ಪ್ರತಿಯೊಬ್ಬರನ್ನು ತೊಡಗಿಸುವುದು; ತನ್ಮೂಲಕ, ಭಾರತದ ಹವಾಮಾನ ಗುರಿಗಳಿಗಾಗಿ, ಹಸಿರು ಪರಿಹಾರಗಳು ಮತ್ತು ಸಮುದಾಯದ ಕ್ರಮವನ್ನು ಉತ್ತೇಜಿಸುವ ಹೆಗ್ಗುರಿ, ಹೊಂದಲಾಗಿದೆ.

<><><>

ರಾಜ್ಯದ ಉತ್ತರ ಒಳನಾಡು ಜಿಲ್ಲೆಗಳಲ್ಲಿ, ತೀವ್ರ ಚಳಿ ಇಂದೂ ಸಹ ಮುಂದುವರೆಯಲಿದ್ದು, ಇಂದು ಮತ್ತು ನಾಳೆ, ಶೀತಗಾಳಿ ಬೀಸುವ ಸಾಧ್ಯತೆ ಇದೆ ಎಂದು, ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

<><><>

ದೇಹದ ಉ ್ಣತೆ ಕಾಪಾಡಿಕೊಳ್ಳಲು, ಜನ ಬೆಚ್ಚಗಿನ ಬಟ್ಟೆ ಧರಿಸಬೇಕು ಹಾಗೂ ಶೀತ ಅಲೆಯ ಸಮಯದಲ್ಲಿ, ಸಾಧ್ಯವಾದ ್ಟು ಒಳಾಂಗಣದಲ್ಲೇ ಇದ್ದು, ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮನವಿ ಮಾಡಿದೆ.

<><><>

ಉತ್ತರ ಒಳನಾಡಿನ, ಬೀದರ, ವಿಜಯಪುರ, ಧಾರವಾಡ ಮತ್ತು ರಾಯಚೂರು ಜಿಲ್ಲೆ ಹಾಗೂ ದಕ್ಷಿಣ ಒಳನಾಡಿನ ಚಿಂತಾಮಣಿ, ಹಾಸನ, ದಾವಣಗೆರೆಯಲ್ಲಿ ತೀವ್ರ ಚಳಿ ಅಲೆ ಕಂಡು ಬಂದಿದೆ.

<><><>

ಬೀದರ, ಬೆಳಗಾವಿ, ವಿಜಯಪುರ, ಧಾರವಾಡ, ಗದಗ ಮತ್ತು ರಾಯಚೂರು, ಹಾಸನ, ದಾವಣಗೆರೆ ಮತ್ತು ಚಿಂತಾಮಣಿಯಲ್ಲಿ ಕನಿಷ್ಠ ತಾಪಮಾನ, 7 ರಿಂದ 10 ದಶಾಂಶ 4 ಡಿಗ್ರಿ ಸೆಲ್ಸಿಯೆಸ್ ನಷ್ಟಿತ್ತು.

<><><>

ಹಾವೇರಿ, ಕೊಪ್ಪಳ, ಕಲಬುರಗಿ, ಶಿವಮೊಗ್ಗ ಮತ್ತು ಬೆಂಗಳೂರಿನಲ್ಲಿ ತಾಪಮಾನ 10 ದಶಾಂಶ 5 ಡಿಗ್ರಿಯಿಂದ 12 ಡಿಗ್ರಿ ಮಧ್ಯದಲ್ಲಿತ್ತು.

<><><>

ರಾಜ್ಯದ ಅತಿ ಕನಿಷ್ಠ ತಾಪಮಾನ, 7 ಡಿಗ್ರಿ ಸೆಲ್ಸಿಯೆಸ್ ವಿಜಯಪುರದಲ್ಲಿ ದಾಖಲಾಗಿದೆ.

<><><>

ಕರ್ನಾಟಕ ರಾಜ್ಯ ಕ್ರಿಕೆಟ್ ನಿಯಂತ್ರಣ ಸಂಸ್ಥೆ ವತಿಯಿಂದ, ಬೀದರನಲ್ಲಿ, ಸುಸಜ್ಜಿತ ಕ್ರೀಡಾಂಗಣ ನಿರ್ಮಾಣಕ್ಕೆ, ಯೋಜನೆ ರೂಪಿಸಲಾಗುವುದು ಎಂದು, ರಾಯಚೂರು ವಲಯದ, ಕೆ.ಎಸ್.ಸಿ.ಎ. ನೂತನ ಸಂಚಾಲಕ, ಕುಶಾಲ ಪಾಟೀಲ, ಗಾದಗಿ ತಿಳಿಸಿದ್ದಾರೆ. ನಗರದ ನೆಹರು ಕ್ರೀಡಾಂಗಣದಲ್ಲಿ, ಮಾತನಾಡಿದ ಅವರು, ಹೈಟೆಕ್ ಕ್ರೀಡಾಂಗಣ ನಿರ್ಮಾಣಕ್ಕೆ, ದಶಕದ ಹಿಂದೆಯೇ, ಕೆ.ಎಸ್.ಸಿ.ಎ. ಚಾಲನೆ ನೀಡಿತ್ತು. ಕಾರಣಾಂತರದಿಂದ, ನನೆಗುದಿಗೆ ಬಿದ್ದಿದೆ. ನೂತನ ಅಧ್ಯಕ್ಷ ವೆಂಕಟೇಶ ಪ್ರಸಾದ್ ಅವರೊಂದಿಗೆ ಚರ್ಚಿಸಿ, ಶೀಘ್ರ ಚಾಲನೆ ನೀಡುವುದಾಗಿ ಹೇಳಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಚಿಟಗುಪ್ಪಿ ಆಸ್ಪತ್ರೆ ಸಭಾಂಗಣದಲ್ಲಿ, ಕೇಂದ್ರ ಪುರಸ್ಕೃತ, ಆರೋಗ್ಯ ವಿಮೆ ಯೋಜನೆ, ವೆಲ್‌ನೆಸ್ ಸೆಂಟರ್, ಕಾರ್ಯಾರಂಭ.
- ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ, ನಾಳೆ ಮತ್ತು ನಾಡಿದ್ದು, 'ಕೃತಕ ಬುದ್ಧಿಮತ್ತೆಯ ಜವಾಬ್ದಾರಿಯುತ ಬಳಕೆ', ಅಂತಾರಾಷ್ಟ್ರೀಯ ವಿಚಾರ ಸಂಕಿರಣ.
- ಗಾಂಧಿ ಗ್ರಾಮ ಪ್ರಶಸ್ತಿ ಪುರಸ್ಕೃತ, 238 ಗ್ರಾಮ ಪಂಚಾಯಿತಿಗಳಲ್ಲಿ, ಮದ್ಯ ಮತ್ತು ಮಾದಕ ವಸ್ತುಗಳ ಬಗ್ಗೆ, ಜನ ಜಾಗೃತಿ.
- ಇಂದು, ರಾಷ್ಟ್ರೀಯ ಇಂಧನ ಸಂರಕ್ಷಣಾ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>